**ಎನ್. ಕೆ. ಪ್ರಭಾಕರರಾವ್**

ಸರ್ಕಾರದ ಮುಖ್ಯ ಕಾರ್ಯದರ್ಶಿ,

ಕರ್ನಾಟಕ ಸರ್ಕಾರ

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**

ವಿಷಯ :- ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕನ್ನಡ ಬಳಕೆ ತನಿಖೆ ಕಾರ್ಯವಹಿಸುವ ಬಗ್ಗೆ

ಓದಲಾಗಿದೆ :- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರ ಪತ್ರ ಸಂ. ಕಸನಿ/ಕಅ2/ಭಾತವಿ/88-89 (ಸಂಕೀರ್ಣ) ದಿನಾಂಕ 16-5-1990.

**ಪ್ರಸ್ತಾವನೆ :**

ಸರ್ಕಾರದ ಭಾಷಾ ನೀತಿಯನ್ನು ಸಮರ್ಪಕವಾಗಿ ಜಾರಿಗೊಳಿಸಲು ನಿರಂತರ ತನಿಖೆ ಹಾಗೂ ಸಮೀಕ್ಷೆ ಕಾರ್ಯಗಳು ಅತ್ಯಗತ್ಯ. ಈ ದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರು ಹಾಗೂ ಅದೇ ಇಲಾಖೆಯ ವಿಭಾಗ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ರಾಜ್ಯ ಕಛೇರಿಗಳಿಗೆ ಭೇಟಿ ನೀಡಿ ಕನ್ನಡ ಬಳಕೆಯ ತನಿಖೆ ಮಾಡುವ ಅಧಿಕಾರವನ್ನು ನೀಡಲು ಸರ್ಕಾರ ತೀರ್ಮಾನಿಸಿದೆ.

ಆದೇಶ ಕ್ರಮಾಂಕ : ಡಿಪಿ.ಎ.ಆರ್ 47 ಕೆ.ಓಎಲ್ 91, ದಿನಾಂಕ 12ನೇ ಮಾರ್ಚ್ 1991.

ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರು ರಾಜ್ಯದ ಯಾವುದೇ ಕಛೇರಿಗೆ ಭೇಟಿ ನೀಡಿ ಕನ್ನಡ ಬಳಕೆಯ ತನಿಖೆ ಮಾಡಲು ಹಾಗೂ ಅದೇ ಇಲಾಖೆಯ ವಿಭಾಗ ಮಟ್ಟದ ಅಧಿಕಾರಿಗಳು (ಉಪನಿರ್ದೇಶಕರು) ಜಿಲ್ಲೆಯ ಅಧಿಕಾರಿಗಳು (ಸಹಾಯಕ ನಿರ್ದೇಶಕರು) ಕ್ರಮವಾಗಿ ತಮ್ಮ ವಿಭಾಗದ/ಜಿಲ್ಲೆಯ ವ್ಯಾಪ್ತಿಯಲ್ಲಿರುವ ಯವುದೇ ಕಛೇರಿಗೆ ಭೇಟಿ ನೀಡಿ ತನಿಖೆ ಮಾಡಲು - ಈ ಮೂಲಕ ಅಧಿಕಾರ ನೀಡಿದೆ.

2. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯಸ್ಥರು ತನಿಖೆಯ

ವರದಿಗಳನ್ನು ಸೂಕ್ತ ಷರಾದೊಂದಿಗೆ ಪ್ರತಿ ತಿಂಗಳು 15ರೊಳಗಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು.

3. ಇಲಾಖೆಯ/ಕಛೇರಿಗಳ ಮುಖ್ಯಸ್ಥರು ತನಿಖೆ ಕಾರ್ಯದಲ್ಲಿ ಸಹಕರಿಸಲು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿಯು ಕೇಳುವ ಎಲ್ಲಾ ದಾಖಲೆಗಳನ್ನು ಒದಗಿಸಲು ( ರಹಸ್ಯ ದಾಖಲೆಗಳನ್ನು ಹೊರತುಪಡಿಸಿ) ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

**(ಬಿ. ಪಾರ್ಥಸಾರಥಿ),**

ಸರ್ಕಾರದ ಸಹ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,